ಈ) ನಿವೇಶನ ಪಡೆದು ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ ಅರ್ಜಿದಾರರಿಗೆ ಸ್ವಾಧೀನಪತ್ರಗಳನ್ನು ನೀಡಲಾಗುತ್ತಿದೆ.

ಸೇಡಂ ತಾಲ್ಲೂಕಿನ ಕೆರೆಗಳನ್ನು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವುದು

2031 (2511) - ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ 100 ಎಕರೆ ಗಿಂತಲೂ ಹೆಚ್ಚು ನೀರಾವರಿಯಾಗುವ ಕೆರೆಗಳನ್ನು ಸಣ್ಣ ನೀರಾವರಿ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಪತ್ರ ವ್ಯವಹಾರ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲು ಇಲಾಖೆಯವರು ಶಿಫಾರಸ್ಸು ಮಾಡಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಇಲ್ಲಿಯವರೆಗೆ ಕ್ರಮ ಕೈಗೊಳ್ಳದಿರಲು ಕಾರಣವೇನು;

ಇ) ಈಗಲಾದರೂ ಸಹ ನೈಜಾಂ ಕಾಲದಲ್ಲಿ ನಿರ್ಮಾಣವಾಗಿರುವ ಈ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಂಡು ದುರಸ್ತಿ ಮಾಡಿಸಿ ರೈತರಿಗೆ ನೀರಾವರಿ ಸೌಲಭ್ಯ ಒದಗುವಂತೆ ಮಾಡುವುದು ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಹೌದು.

ಆ) 40 ಹೆಕ್ಟೇರುಗಳಿಗೂ ಅಂದರೆ 100 ಎಕರೆಗೂ ಕಡಿಮೆ ಆಚ್ಚುಕಟ್ಟು ಇರುವ ಕೆರೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತವೆ. ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿರುವ 100 ಎಕರೆಗೂ ಹೆಚ್ಚಿನ ಆಚ್ಚು ಕಟ್ಟು ಹೊಂದಿರುವ ಕೆರೆಗಳನ್ನು ಸಣ್ಣ ನೀರಾವರಿ ಇಲಾಖೆಯ ವಶಕ್ಕೆ ಪಡೆಯುವ ಬಗ್ಗೆ, ಗ್ರಾಮೀಣಾಬಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೊಂದಿಗೆ ಸಮಾಲೋಚಿಸಿ ಕ್ರಮವನ್ನು ಕೈಗೊಳ್ಳಲಾಗುವುದು.

ಇ) ಇಂತಹ ಕೆರೆಗಳು ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಿದ ನಂತರ, ಅನುದಾನದ ಲಭ್ಯತೆ ಮೇರೆಗೆ ದುರಸ್ಥಿ ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಸೇಡಂ ಪುರಸಭೆಗೆ ಮಂಜೂರಾಗಿರುವ ರಿಂಗ್ ರಸ್ತೆ

2032 (2512) - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಪುರಸಭೆಗೆ 50.00 ಲಕ್ಷ ರೂ.ಗಳು ಮಂಜೂರಿಯಾಗಿ ಸುಮಾರು 2 ವರ್ಷಗಳ ಮೊದಲು ಕೆ.ಯು. ಡಬ್ಲ್ಯೂ ಎಸ್.ರವರು ಈ ಹಣದಿಂದ ರಿಂಗ್ ರಸ್ತೆ ಕೈಗೆತ್ತಿಕೊಂಡಿರುವುದು ನಿಜವಲ್ಲವೇ:

ಆ) ಅವಧಿ ಮೀರಿದರೂ ಸಹ ಇಲ್ಲಿಯವರೆಗೆ ಈ ರಸ್ತೆಯ ಕೆಲಸ ಪೂರ್ತಿಯಾಗದೇ ಸ್ಥಗಿತಗೊಂಡಿರಲು ಕಾರಣವೇನು?